ಜೊತೆಗಿನ ಆಕೆಯ ಸಂಭಾಷಣೆಯಲ್ಲಿ ನಮಗೆ ತಿಳಿಯುತ್ತದೆ. ಸಾವಿತ್ರಿ, 'ತುಂಬಾ ಒಳ್ಳೆಯವನಾ?' ಎಂದು ಆತನ ಬಗೆಗೆ ಕೇಳಿದರೆ ಭ್ರಮರಾ 'ತುಂಬಾ ಹೆಲ್ತಿಯಾಗಿ ಕಾಣಿಸ್ತಾನೆ ಕಣೇ- ಒಳ್ಳೆಯವನೋ ಎಂಥವನೋ ಹಾಳಾದವನು ಗೊತ್ತಿಲ್ಲ' ಎನ್ನುವಷ್ಟು ಸರಾಗ ಸ್ವಭಾವದವಳು. ಜಗ್ಗುವ ಒಡವೆ, ಜಗಮಗಿಸುವ ರೇಷ್ಮೆ ಸೀರೆ, ನವಿರಾಗಿ ಆವರಿಸುವ ಸುಗಂಧ, ಅರಶಿನ ಎಲ್ಲದರ ಬಗೆಗೂ ಮೋಹವಿರುವ ಭ್ರಮರಾ ಸಾವಿತ್ರಿಯ ಸರಳತೆ, ಆಳದ ಗೊಂದಲ ಎಲ್ಲವನ್ನು ಅರ್ಥ ಮಾಡಿಕೊಳ್ಳುವಷ್ಟು ಮತ್ತು ಅದನ್ನು ಗೌರವಿಸುವಷ್ಟು ಪ್ರಬುದ್ಧಳು.

ಆದರೆ ಸಾವಿತ್ರಿಯ ಗೊಂದಲಗಳು, ಪ್ರೇಮ, ಮದುವೆ ಇಷ್ಟಕ್ಕೆ ನಿಲ್ಲುವುದಿಲ್ಲ. ಹೋರಾಟಗಾರ್ತಿ ಅಚ್ಚಮ್ಮನ ಸಹವಾಸಕ್ಕೆ ಬಿದ್ದು ಪ್ರತಿಭಟನೆ ವೇದಿಕೆಗಳಿಗೆ ಕರೆದೊಯ್ದರೂ ಅಲ್ಲಿಯೂ ಯಾರನ್ನೂ ಒಳಗೊಳ್ಳಲಾರದ ತನ್ನ ಹಿಂಜರಿಕೆಯಿಂದ ಚಿಪ್ಪಿನಲ್ಲಿ ಅಡಗುವವಳು. ಅಂಗೈ ಅರಗಿಣಿಯ ಅಂಶಗಳು ಸಾವಿತ್ರಿಯಲ್ಲಿ ಇನ್ನೂ ಅಡಗಿರುವುದು, ಯಾವ ಪ್ರತಿಭಟನೆಗೂ ಹೋಗದೆ ಖಾಸಗಿಯಾಗಿ ಸೇವಕಿಯಂತೆ ನೆಮ್ಮದಿಯಾಗಿರುವ ಆಶೆಯನ್ನು ಆಳವಾಗಿ ಅವಳು ಹೊಂದಿರುವುದನ್ನು ಅಚ್ಚಮ್ಮ ಸರಿಯಾಗಿಯೇ ಗುರುತಿಸುತ್ತಾಳೆ. ಈ ಎರಡೂ ಸಂದರ್ಭದಲ್ಲಿ ಸಾವಿತ್ರಿ ಮತ್ತು ಭ್ರಮರಾಂಬ ಬೇರೆ ಯಾರೋ ಅನಿಸದೇ ನನ್ನ ವ್ಯಕ್ತಿತ್ವವೇ ಅಲ್ಲಿ ಅನಾವರಣಗೊಳ್ಳುತ್ತಿದೆಯೇನೋ ಎಂದು ಭಾವಿಸಿರುವೆ. ಅದೇ ಭಾವದಿಂದ ಈ ಕಥೆಯನ್ನು ಇಪ್ಪತ್ತಕ್ಕಿಂತ ಹೆಚ್ಚು ಬಾರಿ ಓದಿರುವೆ, ಪ್ರತೀ ಓದಿನಲ್ಲೂ ನನಗೆ ಇದೇ ರೀತಿ ಅನಿಸಿದೆ. ಹಾಗೆ ಕಾಡಿದ ಗಳಿಗೆಯಲ್ಲಿ ಕವಿತೆಯೊಂದು ನನ್ನಿಂದ ಬರೆಸಿಕೊಂಡಿತು, ಅದಕ್ಕೆ 'ಕೊಲಾಜ್' ಎಂದು ಹೆಸರು ಕೊಟ್ಟೆ.

'ಲಂಕೇಶರ ಕಥೆಯಲ್ಲೊಬ್ಬ ಹುಡುಗಿ
ಮದುವೆಯಾದವಳು
ಸಂಸಾರದ ಸುಖದಲ್ಲಿ ಮೈಮರೆತವಳು
ಅಪ್ಪ, ಅಮ್ಮ ಸಖಿಯರು, ಅವಳೂರು
ಅಲ್ಲಿನ ನದಿ ಬೆಟ್ಟ ಅವಳಾಡಿದ ಬಯಲು
ಓಡಾಡಿದ ಓಣಿ, ಸಾವಧಾನದ ಹಿರಿಯರು
ಪಾಠ ಹೇಳುತ್ತಾ ಹೇಳುತ್ತಾ ಏನೋ
ನೆನೆದು ಬಿಕ್ಕುತ್ತಿದ್ದ ಟೀಚರುಗಳು
ಹೊಂಚು ಹಾಕಿ ಕಾದ ಹುಡುಗರು.
ಎಲ್ಲವೂ ವಿಸ್ಮೃತಿಗೆ ಸಂದು
ಈ ಕ್ಷಣದ್ದೆ ನಿಜ ಇದೇ ಬದುಕು ಎಂಬಂತೆ
ಅಂತದ್ದೇನೂ ಅವಘಡ ಸಂಭವಿಸಲಿಲ್ಲ
ದಿನವೂ ಅಪ್ಪಳಿಸುವ ಅಲೆಗಳ ಲೆಕ್ಕಕ್ಕೆ
ತೆಗೆದುಕೊಳ್ಳದ ಬಂಡೆ ಕೊನೆಗೊಮ್ಮೆ
ಜರ್ಜರಿತವಾಗಿ ಕದಲಿದಂತೆ
ಎಚ್ಚೆತ್ತು ನೋಡಿದರೆ
ಬಾಲ್ಯದ ಬಂಧಗಳು ಎಲ್ಲಿಯೋ ಚದುರಿ
ಅಪ್ಪ ಅಮ್ಮ ಕಣ್ಣಾಚೆ ತೊಲಗಿ ಹೋಗಿರುತ್ತಾರೆ.

ತಾನೇ ಸುಖಿ ಸಂಸಾರದೊಳಗೆ
ಎಂಬ ನಡಿಗೆಯ ಆಳದಲ್ಲಿ ಎಲ್ಲೋ ಅಸ್ಪಷ್ಟತೆ
ಕಟ್ಟುವ ಚೈತನ್ಯವನು ಕಳೆದುಕೊಂಡಾಕೆ
ಜಗಳದಲಿ ಕಾವ್ಯದಲಿ ಹಾಸ್ಯದಲಿ
ಪ್ರೇಮದಲಿ ಮತ್ತಿನಲಿ ಮೆತ್ತೆಯಲಿ
ಆದ ಪಡೆಯುವ ಹಂಬಲವು ಉಳಿಯದೆ
ಸುಮ್ಮನೆ ಮುಗಿದು ಹೋಗುತ್ತಾಳೆ
ಆಳದ ನಿರ್ಲಿಪ್ತತೆಯಲಿ
ನನಗೋ ಆ ಹೆಣ್ಣನ್ನು ಕಾಣುವ ತವಕ
ಹಾಗಂತ ಧ್ಯಾನಿಸಿದರೆ ಮಕಮಲ್ಲಿನ ಹಿಂದೆ
ಅಡಗಿದ್ದ ನನ್ನ ಛಾಯೆಯೆ
ಪ್ರತ್ಯಕ್ಷವಾಗಿ ಬೆಚ್ಚಿಬೀಳಿಸಿತು
ಅಳಿಸಿ ಹಾಕಲು ನೋಡಿದಷ್ಟೂ ಆ ಛಾಯೆ
ಢಾಳಾಗಿ ಬೆಳೆಯುತ್ತಾ ಹೋಯಿತು.

ಸಮಾಧಾನಗೊಂಡೆ! ಅಮ್ಮ ಗೆಳತಿ ಅತ್ತೆ ಟೀಚರ್
ಎಲ್ಲರ ಛಾಯೆಗಳು ನನ್ನೊಳಗೆ ಹೆಣೆದುಕೊಂಡು
ಸುಂದರ ಕೊಲಾಜ್ ಸಿದ್ಧಗೊಂಡಿತು.
ಅದೀಗ ನನ್ನ ಮೇಜನ್ನು ಸಿಂಗರಿಸಿದೆ'.

ಸಾವಿತ್ರಿ-ಭ್ರಮರಾರ ಪ್ರತಿಬಿಂಬವನ್ನು ಒಂದಲ್ಲ ಒಂದು ಆಯಾಮದಲ್ಲಿ ನನ್ನೊಳಗೂ, ನನ್ನಮ್ಮ, ಚಿಕ್ಕಮ್ಮ, ಅತ್ತೆ, ಟೀಚರ್ ಗೆಳತಿ ಎಲ್ಲರೊಳಗೂ ಕಂಡಿರುವೆ. ಕಥೆಯ ಪಾತ್ರವೊಂದು ನನ್ನಲ್ಲಿ ಪದ್ಯವಾಗಿ ಬೆಳೆದು ಸ್ಥಾಯಿಯಾಗಿ ನಿಂತ ಬಗೆಯಿದು.